ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಮುಕ್ತಗಂಗೋತ್ರಿ, ಮೈಸೂರು-570 006

## ಕಚೇರಿ ಆದೇಶ

**ವಿಷಯ:-** ಶ್ರೀ ಸಾಯಿ ಸಂಜೆ ಕಾಲೇಜು, ಮತ್ತಿಕೆರೆ, ಬೆಂಗಳೂರು. ಈ ಕಲಿಕಾರ್ಥಿ ಸಹಾಯ ಕೇಂದ್ರವನ್ನು ರದ್ದುಗೊಳಿಸುವ ಬಗೆಗೆ.

**ಉಲ್ಲೇಖ :-**
1. ಕಲಿಕಾರ್ಥಿ ಸಹಾಯ ಕೇಂದ್ರ ಸ್ಥಾಪನೆ ಆದೇಶ ಸಂಖ್ಯೆ: ಕರಾಮುವಿ/ಡೀನ್(ಅ.ಕೇ)/ಕಸಕೇ/2022-23, ದಿನಾಂಕ: 18-10-2022.
2. ವಿದ್ಯಾರ್ಥಿಗಳ ದೂರಿನ ದಿನಾಂಕ:-06-11-2023.
3. ಪ್ರಾದೇಶಿಕ ನಿರ್ದೇಶಕರ ವರದಿ ಪತ್ರ ಸಂಖ್ಯೆ: ಕರಾಮುವಿ/ಮ.ಪ್ರಾ.ಕೇ.ಬೆಂ/ನಂ-192/2022-23, ದಿನಾಂಕ:-06-12-2023
4. ಕಾರಣ ಕೇಳಿ ನೋಟಿಸ್ ಪತ್ರ ಸಂಖ್ಯೆ: ಕರಾಮುವಿ/ಡೀನ್(ಅ.ಕೇ)/ಡಿ ಎಸ್ ಸಿ-07/2023-24, ದಿನಾಂಕ: 22-12-2023.
5. ಅಂತಿಮ ಎಚ್ಚರಿಕೆ ಪತ್ರ ಸಂಖ್ಯೆ: ಕರಾಮುವಿ/ಡೀನ್(ಅ.ಕೇ)/ಡಿ ಎಸ್ ಸಿ-07/2024-25, ದಿನಾಂಕ: 01-07-2024.
6. ವಿದ್ಯಾರ್ಥಿಯ ದೂರು ಈ-ಮೇಲ್ ಮೂಲಕ, ದಿನಾಂಕ: 01-03-2025.
7. ಪ್ರವೇಶಾತಿ ಉಪಕುಲಸಚಿವರ ವರದಿ ಪತ್ರ ಸಂಖ್ಯೆ: ಕರಾಮುವಿ/ಪ್ರವಿ/ಎಡಿಎಂ-1/74/ಪ್ರನ/2024-25, ದಿನಾಂಕ:06-03-2025
8. ಶ್ರೀ ಸಾಯಿ ಸಂಜೆ ಕಾಲೇಜು ಮತ್ತಿಕೆರೆ ಬೆಂಗಳೂರು. ಈ ಕಲಿಕಾರ್ಥಿ ಸಹಾಯ ಕೇಂದ್ರವನ್ನು ರದ್ದುಗೊಳಿಸಲು ಮಾನ್ಯ ಕುಲಪತಿಗಳ ಅನುಮೋದನೆಯ ದಿನಾಂಕ: 21-03-2025.

*****

**ಪ್ರಸ್ತಾವನೆ:-**

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು "ಉನ್ನತ ಶಿಕ್ಷಣ ಎಲ್ಲರಿಗೂ ಎಲ್ಲೆಡೆ" ಎಂಬ ಧ್ಯೇಯ ವಾಕ್ಯದೊಂದಿಗೆ ಪ್ರಾರಂಭವಾಗಿದ್ದು, ವಿದ್ಯಾರ್ಥಿಗಳಿಗೆ ಪಾಠ ಪ್ರವಚನೆಗಳನ್ನು ಕಲ್ಪಿಸುವ ದೃಷ್ಟಿಯಿಂದ ಕಲಿಕಾರ್ಥಿ ಸಹಾಯ ಕೇಂದ್ರಗಳನ್ನು ವಿಶ್ವವಿದ್ಯಾನಿಲಯವು ರಾಜ್ಯದ್ಯಾಂತ ಸ್ಥಾಪಿಸಲಾಗಿದೆ, ಆದರಂತೆ ಶ್ರೀ ಸಾಯಿ ಸಂಜೆ ಕಾಲೇಜು, ಮತ್ತಿಕೆರೆ, ಬೆಂಗಳೂರು. ಈ ಶಿಕ್ಷಣ ಸಂಸ್ಥೆಯಲ್ಲಿ ಉಲ್ಲೇಖ(1)ರ ಅನ್ವಯ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕಲಿಕಾರ್ಥಿ ಸಹಾಯ ಕೇಂದ್ರವನ್ನು ಸ್ಥಾಪಿಸಿ ಆದೇಶ ಹೊರಡಿಸಲಾಗಿದೆ.

ಮುಂದುವರೆದು ಸದರಿ ಶಿಕ್ಷಣ ಸಂಸ್ಥೆಯವರು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಮೊದಲನೇ ವರ್ಷದ ವಿವಿಧ ಶೈಕ್ಷಣಿಕ ವಿಷಯಗಳ ವಿದ್ಯಾರ್ಥಿಗಳಿಗೆ ಪ್ರವೇಶಾತಿ ಪೂರ್ವ ಸಮಾಲೋಚನೆ ನಡೆಸುವ ಸಂದರ್ಭದಲ್ಲಿ ವಿದ್ಯಾರ್ಥಿಗಳಿಂದ ಹೆಚ್ಚಿನ ಶುಲ್ಕವನ್ನು ಪಡೆಯುತ್ತಿರುವ ಬಗ್ಗೆ ದೂರುಗಳು ಬಂದ ಕಾರಣ, ಈಗಾಗಲೇ ವಿಶ್ವವಿದ್ಯಾನಿಲಯವು ಉಲ್ಲೇಖ(5)ರಂತೆ ಅಂತಿಮ ಎಚ್ಚರಿಕೆ ಪತ್ರವನ್ನು ನೀಡಿ ವಿದ್ಯಾರ್ಥಿಗಳಿಂದ ಹೆಚ್ಚಿನ ಶುಲ್ಕವನ್ನು ಪಡೆಯುತ್ತಿರುವ ದೂರುಗಳು ಮರುಕಳಿಸಿದ್ದಲ್ಲಿ ತಮ್ಮ ಕಲಿಕಾರ್ಥಿ ಸಹಾಯ ಕೇಂದ್ರವನ್ನು ಯಾವುದೇ ಸೂಚನೆ ನೀಡದೆ ಕರಾಮುವಿಯ ಕಲಿಕಾರ್ಥಿ ಸಹಾಯ ಕೇಂದ್ರಗಳ ಪಟ್ಟಿಯಿಂದ ಕೈಬಿಡಲಾಗುವುದು ಎಂದು ತಿಳಿಸಲಾಗಿತ್ತು. ಆದರು ಸಹ ಎರಡನೇ ಮತ್ತು ಮೂರನೇ ವರ್ಷದ ವಿದ್ಯಾರ್ಥಿಗಳಿಂದ ಪ್ರವೇಶಾತಿ ಪ್ರಕ್ರಿಯೆಗೆ ಸಂಬಂಧಿಸಿದ ಪ್ರವೇಶಾತಿ ಶುಲ್ಕವನ್ನು ವಿಶ್ವವಿದ್ಯಾನಿಲಯ ನಿಯಮಬಾಹಿರವಾಗಿ ಪ್ರವೇಶಾತಿ ಶುಲ್ಕ ಪಡೆದಿರುವ ಬಗ್ಗೆ ವಿಶ್ವವಿದ್ಯಾನಿಲಯದ ಗಮನಕ್ಕೆ ಬಂದಿರುತ್ತದೆ. ಈ ಸಂಬಂಧ ಪ್ರವೇಶಾತಿ ಉಪಕುಲಸಚಿವರಿಂದ ಉಲ್ಲೇಖ(7)ರಂತೆ ವರದಿಯನ್ನು ಸಹ ಪಡೆಯಲಾಗಿದೆ.

ವಿಶ್ವವಿದ್ಯಾನಿಲಯದಿಂದ ಕಲಿಕಾರ್ಥಿ ಸಹಾಯ ಕೇಂದ್ರಕ್ಕೆ ಅಂತಿಮ ಎಚ್ಚರಿಕೆ ಪತ್ರ ನೀಡಿದ ನಂತರವು ವಿದ್ಯಾರ್ಥಿಗಳಿಂದ ಹೆಚ್ಚಿನ ಶುಲ್ಕವನ್ನು ಪಡೆದಿರುವ ಸಂಬಂಧ ದೂರು ಬಂದಿರುವುದರಿಂದ ಸದರಿ ವಿಚಾರವನ್ನು ವಿಶ್ವವಿದ್ಯಾನಿಲಯವು ಗಂಭೀರವಾಗಿ ಪರಿಗಣಿಸಿ, ಉಲ್ಲೇಖ(8)ರಂತೆ ಸದರಿ ಕಲಿಕಾರ್ಥಿ ಸಹಾಯ ಕೇಂದ್ರವನ್ನು ರದ್ದುಪಡಿಸುವ ಸಂಬಂಧ ಮಾನ್ಯ ಕುಲಪತಿಗಳು ಅನುಮೋದನೆ ನೀಡಿರುವ ಹಿನ್ನಲೆ ಶ್ರೀ ಸಾಯಿ ಸಂಜೆ ಕಾಲೇಜು, ಮತ್ತಿಕೆರೆ, ಬೆಂಗಳೂರು. ಈ ಶಿಕ್ಷಣ ಸಂಸ್ಥೆಯಲ್ಲಿ ಸ್ಥಾಪಿಸಲಾಗಿರುವ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕಲಿಕಾರ್ಥಿ ಸಹಾಯ ಕೇಂದ್ರವನ್ನು ರದ್ದುಗೊಳಿಸಿ ಈ ಆದೇಶ ಹೊರಡಿಸಲಾಗಿದೆ.

**ಆದೇಶ ಸಂಖ್ಯೆ: ಕರಾಮುವಿ/ಡೀನ್(ಅ.ಕೇ)/ಕ.ಸ.ಕೇ/DSC07/SSEC/2025-26, ದಿನಾಂಕ : 29.04.2025.**

ಮೇಲಿನ ಪ್ರಸ್ತಾವನೆಗೊಳಪಟ್ಟು, ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ, ಶ್ರೀ ಸಾಯಿ ಸಂಜೆ ಕಾಲೇಜು, ಮತ್ತಿಕೆರೆ, ಬೆಂಗಳೂರು. ಈ ಶಿಕ್ಷಣ ಸಂಸ್ಥೆಯಲ್ಲಿ ಸ್ಥಾಪಿಸಲಾಗಿರುವ ಕಲಿಕಾರ್ಥಿ ಸಹಾಯ ಕೇಂದ್ರವನ್ನು ದಿನಾಂಕ: 21-03-2025ರಿಂದ ಜಾರಿಗೆ ಬಂದಂತೆ ರದ್ದುಗೊಳಿಸಿ ಆದೇಶಿಸಲಾಗಿದೆ.

ಆದೇಶದ ಮೇರೆಗೆ

ಕುಲಸಚಿವ

ಗೆ,

ಸಂಯೋಜನಾಧಿಕಾರಿ,
ಶ್ರೀ ಸಾಯಿ ಸಂಜೆ ಕಾಲೇಜು,
ಎಂ.ಎಸ್. ರಾಮಯ್ಯ ರಸ್ತೆ
ಮತ್ತಿಕೆರೆ, ಬೆಂಗಳೂರು-560054

ಪ್ರತಿಗಳು:-
1. ಮಾನ್ಯ ಕುಲಪತಿಗಳ ಆಪ್ತ ಸಹಾಯಕರು, ಕರಾಮುವಿ, ಮೈಸೂರು.
2. ಮಾನ್ಯ ಕುಲಸಚಿವರ ಆಪ್ತ ಸಹಾಯಕರು. ಕರಾಮುವಿ, ಮೈಸೂರು.
3. ಡೀನ್(ಶೈಕ್ಷಣಿಕ) ಕರಾಮುವಿ, ಮೈಸೂರು.
4. ಕುಲಸಚಿವರು (ಪರೀಕ್ಷಾಂಗ) ಕರಾಮುವಿ, ಮೈಸೂರು.